ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU
CITY UNIVERSITY

Office of the Registrar (Evaluation), Central College Campus, Dr.AmbedkarVeedhi,
Bengaluru – 560 001. E-mail: registrarevlubcu@gmail.com, Ph.No.080-2229555

ಸಂಖ್ಯೆ: ಬೆಂ.ಕೇ.ವಿ/ಪ.ವಿ/ಪರೀಕ್ಷಾ ಮೌಲ್ಯಮಾಪನ/ಯು.ಜಿ/2022–23 ದಿನಾಂಕ:10.10.2022

## ಸುತ್ತೋಲೆ

**ವಿಷಯ: 2021–22ನೇ ಸಾಲಿನ 2ನೇ ಸೆಮೆಸ್ಟರ್ (ರಿಪೀಟರ್ಸ್), 4 ಮತ್ತು 6 ನೇ ಸೆಮೆಸ್ಟರ್ (ಪ್ರೆಷರ್ಸ್ & ರಿಪೀಟರ್ಸ್) ಪರೀಕ್ಷೆಗಳ ಮೌಲ್ಯಮಾಪನ ಕಾರ್ಯಕ್ಕೆ ಎಲ್ಲಾ ಅರ್ಹ ಅಧ್ಯಾಪಕರನ್ನು (ಅತಿಥಿ ಉಪನ್ಯಾಸಕರು ಸೇರಿದಂತೆ) ಕಳುಹಿಸಿಕೊಡುವ ಬಗ್ಗೆ.**

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಿಳಿಸುವುದೇನೆಂದರೆ, ಸೆಪ್ಟೆಂಬರ್/ಅಕ್ಟೋಬರ್ 2022 ರಲ್ಲಿ ನಡೆದಿರುವ ಸ್ನಾತಕ ಕೋರ್ಸುಗಳ 2ನೇ ಸೆಮೆಸ್ಟರ್ (ರಿಪೀಟರ್ಸ್), 4 ಮತ್ತು 6 ನೇ ಸೆಮೆಸ್ಟರ್ (ಪ್ರೆಷರ್ಸ್ & ರಿಪೀಟರ್ಸ್) ಸೆಮಿಸ್ಟರಿನ ಮೌಲ್ಯಮಾಪನ ಕಾರ್ಯ ಆರಂಭಿಸಿ ಶೀಘ್ರವಾಗಿ ಫಲಿತಾಂಶಗಳನ್ನು ಪ್ರಕಟಿಸಬೇಕಿದೆ.

ಈಗ ದಿನಾಂಕ 12.10.2022 ರಿಂದ ಮೌಲ್ಯಮಾಪನ ಕಾರ್ಯ ನಡೆಯಲಿದ್ದು, ತಾವು ತಪ್ಪದೇ ತಮ್ಮ ಕಾಲೇಜಿನ ಎಲ್ಲಾ ಅರ್ಹ ಅಧ್ಯಾಪಕರನ್ನು(ಅತಿಥಿ ಉಪನ್ಯಾಸಕರು ಸೇರಿದಂತೆ) ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿರ್ದೇಶನ ನೀಡಬೇಕೆಂದು / ಸೂಚಿಸಬೇಕೆಂದು ಕೋರಲಾಗಿದೆ. **ಸ್ನಾತಕ ಕೋರ್ಸುಗಳ 2ನೇ ಸೆಮೆಸ್ಟರ್ (ರಿಪೀಟರ್ಸ್), 4 ಮತ್ತು 6ನೇ (ಪ್ರೆಷರ್ಸ್ & ರಿಪೀಟರ್ಸ್) ಸೆಮಿಸ್ಟರಿನ ಮೌಲ್ಯಮಾಪನ ಕಾರ್ಯವು ಜಯನಗರ ನಾಲ್ಕನೇ ಬ್ಲಾಕ್‌ನಲ್ಲಿರುವ ವಿಜಯ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯಲಿದ್ದು, ಆಯಾ ವಿಷಯಗಳ ಮೌಲ್ಯಮಾಪಕರು ತಪ್ಪದೇ ಹಾಜರಾಗಿ ವಿದ್ಯಾರ್ಥಿಗಳ ಮತ್ತು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕಾರ್ಯ ನಿರ್ವಹಿಸಬೇಕೆಂದು ಕೋರಲಾಗಿದೆ.**

KSU Act 2000 Section 73,74& 75 ಮತ್ತು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ – 2018ರ ಪ್ರಕಾರ, ಪರೀಕ್ಷೆಯ ಕೆಲಸ ಕಡ್ಡಾಯವಾಗಿದ್ದು, ಎಲ್ಲಾ ಅಧ್ಯಾಪಕರುಗಳನ್ನು ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಲು ಸೂಚಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ.

ಆದುದರಿಂದ, ದಯಮಾಡಿ ತಾವು ಈ ವಿಚಾರದಲ್ಲಿ ಸಕ್ರಿಯ ಸಹಕಾರ ನೀಡಬೇಕೆಂದು ಕೋರಿಕೆ.

Lokesha. U
ಕುಲಸಚಿವರು(ಮೌಲ್ಯಮಾಪನ)
Registrar (Evaluation)
Bengaluru City University
Central College Campus
Bengaluru - 560 001

ಗೆ,

ಬೆಂಗಳೂರು ನಗರ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

ಪ್ರತಿಗಳು:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ವೀಧಿ, ಮಹಾರಾಣಿಕಾಲೇಜುಎದರು, ಬೆಂಗಳೂರು – 560001.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು – 560001.
3. ವೆಬ್‌ಸೈಟ್ ನಿವಾಹಕರು, ಮೇಲೆ ಹೇಳಿರುವ ಸುತ್ತೋಲೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಹಾಗೂ ಕಾಲೇಜ್ ಪೋರ್ಟಲ್‌ನಲ್ಲಿಅಪ್ಲೋಡ್ ಮಾಡಲುಕೋರಲಾಗಿದೆ.